


ಮೆಂಡೆಲ್ ಕುರಿತ ಲೇಖನ ಪ್ರಕಟಗೊಂಡ 'ಸುಧಾ' ಸಂಚಿಕೆ ಹಾಗೂ ಚಾರ್ಲ್ಸ್ ಡಾರ್ವಿನ್ ಕೃತಿಯನ್ನು ಲೇಖಕರು ಮ್ಯೂಸಿಯಂಗೆ ನೀಡುತ್ತಿರುವುದು.

ತಿಳಿಸಿತು. ಒಮ್ಮೆಗೇ ಉತ್ಸುಕನಾದೆ ನಾನು. ನಾವು ಯೂರೋಪ್ ಪ್ರವಾಸ ಮಾಡುವ ಹಂಬಲವೂ ಇತ್ತು. ಅಧಿವೇಶನದಲ್ಲಿ ಭಾಗವಹಿಸಲು ಕೂಡಲೇ ಹೆಸರು ನೋಂದಾಯಿಸಿಕೊಂಡೆ. ಆದರೆ ಆ ಸಮಯಕ್ಕೆ ಅಲ್ಲಿಗೆ ಹೋಗಲಾಗಲಿಲ್ಲ. ಆ ಮಾತು ಬೇರೆ.

ನಾನು ಹಾಗೂ ನನ್ನ ಪತ್ನಿ ಉಷಾ, 2022ರ ಆಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ವಿಯೆನ್ನಾ, ವಾರ್ಸಾ, ಕ್ರಾಕೊವ್, ಲಂಡನ್, ಆಮ್‌ಸ್ಟರ್‌ಡ್ಯಾಮ್, ಪ್ಯಾರಿಸ್ ಮತ್ತು ಮ್ಯೂನಿಕ್ ನಗರಗಳಲ್ಲಿ ಸಂಚರಿಸಿದೆವು. ಎಲ್ಲೆಡೆ, ವಿಜ್ಞಾನಿಗಳ ಮನೆ ಅಥವಾ ಅವರು ಕಾರ್ಯನಿರ್ವಹಿಸಿದ ಸ್ಥಳ – ಇವಕ್ಕೆ ಮಾತ್ರ ನಮ್ಮ ಸಂಚಾರವನ್ನು ಸೀಮಿತಗೊಳಿಸಿದೆವು.

ನಾವು ಮೊದಲು ನೋಡಿದ ಸ್ಥಳ ಬ್ರೂನೋ. ವಿಯೆನ್ನಾದಲ್ಲಿ ತಂಗಿದ್ದ ನಮಗೆ ಅಲ್ಲಿಗೆ ಹೋಗುವುದು ಸುಲಭವಾಯಿತು. ಒಂದೂವರೆ ಗಂಟೆಯ ರೈಲು ಪ್ರಯಾಣ ಅಷ್ಟೇ. ಆಸ್ಟ್ರೇಲಿಯಾದ ಪಾಸ್‌ಪೋರ್ಟ್ ಹೊಂದಿದ್ದರಿಂದ ನಮಗೆ ವಿಶ್ವದ ಅನೇಕಾನೇಕ ದೇಶಗಳಿಗೆ ವೀಸಾದ ಅವಶ್ಯಕತೆ ಇಲ್ಲ. ಬ್ರೂನೋದಲ್ಲಿ ಟ್ರೈನ್ ಇಳಿದ ನಮಗೆ ಆಶ್ಚರ್ಯ ಕಾದಿತ್ತು. ಮೆಂಡೆಲನ ಬಗ್ಗೆ ಅಧಿವೇಶನ, ಪ್ರದರ್ಶನ ನಡೆದು ಇನ್ನೂ ಎರಡು ವಾರವಾಗಿರಲಿಲ್ಲ. ಆದರೆ ಅಲ್ಲಿಯ ಟ್ಯಾಕ್ಸಿ ಡ್ರೈವರುಗಳಿಗೆ ಮೆಂಡೆಲನ ಬಗ್ಗೆ ಯಾವುದೇ ಅರಿವಿರಲಿಲ್ಲ. ನಾವು ಪರಿ ಪರಿಯಾಗಿ ಮೆಂಡೆಲ್ ಎಂದು ಹೇಳಿದೆವು. 'ಗೊತ್ತಿಲ್ಲ'ವೆಂಬ ಉತ್ತರ. ಅಲ್ಲಿದ್ದ ಪೊಲೀಸಿನವನನ್ನು ವಿಚಾರಿಸಿದಾಗ, 'ವಿಳಾಸ ಕೊಡಿ, ನೋಡಿ ಹೇಳುತ್ತೇನೆ' ಎಂದ! ನಮಗೆ 'ಮೆಂಡೆಲ್ ಮ್ಯೂಸಿಯಂ' ಎಂದಷ್ಟೇ ತಿಳಿದಿತ್ತು. ಅಡ್ರೆಸ್ ತಿಳಿದಿರಲಿಲ್ಲ. ಆಗ ನಮ್ಮನ್ನು ಸಲಹಿದ್ದು ನಮ್ಮ ಬವಣೆಯನ್ನು ನೋಡುತ್ತಿದ್ದ ಕೆನಡಾ ದೇಶದ ಓರ್ವ ಟ್ಯಾಕ್ಸಿ ಡ್ರೈವರ್. ಅಚ್ಚ ಇಂಗ್ಲಿಷಿನಲ್ಲಿ ಮಾತನಾಡಿದ ಆತ, 'ಎಲ್ಲಿಗೆ ಹೋಗಬೇಕು?' ಎಂದು ಕೇಳಿದ. ನಾವು ಉತ್ತರ ಕೊಟ್ಟ ತಕ್ಷಣ ತನ್ನ ಮೊಬೈಲಿನಲ್ಲಿ ಗೂಗಲ್ ತೆರೆದು, 'ಅಲ್ಲಿಗೆ ತಾನೇ. ದೂರವೇನಿಲ್ಲ ಬನ್ನಿ' ಎಂದು ನಮ್ಮನ್ನು ಹತ್ತಿಸಿಕೊಂಡ.

ಹದಿನೈದು ನಿಮಿಷಗಳ ದಾರಿ. ಟ್ಯಾಕ್ಸಿ ಡ್ರೈವರ್ ತನ್ನ ಕಥೆಯನ್ನು ಹೇಳಿಕೊಂಡು ಬಂದ. ಹದಿನೆಂಟು ವರ್ಷಗಳಿಂದ ಅಲ್ಲಿಯೇ ಅವನ ವಾಸ. ಅವನ ಹೆಂಡತಿ ಸ್ಥಳೀಯಳು, ಜೀವನ ತುಂಬಾ ಚೆನ್ನಾಗಿದೆ, ಇತ್ಯಾದಿ, ಇತ್ಯಾದಿ.

ಮ್ಯೂಸಿಯಂ ತಲುಪಿದೆವು. ದೊಡ್ಡದಾದ ಚಚ್ಚೌಕ, ಅದರ ಒಂದು ಬದಿಯಲ್ಲಿ ಸುಮಾರು




ಮಹಾವಿಜ್ಞಾನಿಯ ಅಂತಿಮ ನಿಲ್ದಾಣದ ಸ್ಥಳ

ಇನ್ನೂರು ಮೀಟರ್ ಉದ್ದದ ಕಾಂಪೌಂಡ್. ಅದರ ಒಳಗಿರುವ, ಸಂತ ಥಾಮಸ್‌ನ 'ಆಗಸ್ಟಿನಿಯನ್ ಅಬಿ' ಹೆಸರಿನ (**Augustinian Abbey of St. Thomas**) ದೊಡ್ಡ ಮೊನಾಸ್ಟರಿ ಅಥವಾ ಚರ್ಚ್. ಅದೀಗ ಮೆಂಡೆಲನ ಸ್ಮಾರಕವಾಗಿದೆ. ಅದರ ಪ್ರವೇಶದ್ವಾರವನ್ನು ಗುರುತಿಸುವುದೇ ಕಷ್ಟವಾಯಿತು. ಮತ್ತೆ ನಮ್ಮ ಡ್ರೈವರ್ ದಾರಿ ತೋರಿಸಿದ.

ಕಟ್ಟಡವನ್ನು ಪ್ರವೇಶಿಸಿದಾಗ ಯಾವುದೋ ಚಾಪೆಲ್ ಒಳಹೊಕ್ಕಂತೆ ಭಾಸವಾಗುತ್ತದೆ. ಅಲ್ಲಿಯ ಟಿಕೆಟ್ ನೀಡುವ ಕಚೇರಿಯಲ್ಲಿ ಮುಖ್ಯ ಅಧಿಕಾರಿ ಅಮಾಲಿ ಚಾಚೋಲೊವಾ ಮತ್ತು ಗೈಡ್, ಅಲೆಸ್ ಜಪೋಟೋಕಿ ನಮಗಾಗಿ ಕಾದು ಕುಳಿತಿದ್ದರು.

ಉಭಯ ಕುಶಲೋಪರಿ ಆದ ನಂತರ ಅಲೆಸ್ ನಮ್ಮನ್ನು ಒಳಗೆ ಕೊಂಡೊಯ್ದರು. 'ನಮ್ರ ಮೇಧಾವಿಯ ಕಥೆ' (**The Story of a Humble Genius**) ಎಂದು ಕರೆಸಿಕೊಳ್ಳುವ ಈ ಪ್ರದರ್ಶನ ಕಟ್ಟಡದ ಅನೇಕ ಕೊಠಡಿಗಳಲ್ಲಿ ಹರಡಿಕೊಂಡಿದೆ. ಮೆಂಡೆಲನ ಜೀವನದ ಪ್ರಮುಖ ಘಟ್ಟಗಳನ್ನು ಆ ಕಟ್ಟಡ ಬಿಂಬಿಸುತ್ತದೆ. ಬಾಲ್ಯ ಮತ್ತು ವಿದ್ಯಾಭ್ಯಾಸ, ಚರ್ಚಿಗೆ ಸೇರ್ಪಡೆ, ಹಸಿರು ಬಟಾಣಿ ಗಿಡಗಳೊಂದಿಗೆ ಪ್ರಯೋಗಗಳು, ಪಾದ್ರಿಯಾಗಿ ಆಯ್ಕೆ, ಮೆಂಡೆಲನ ಇತರೆ ಆಸಕ್ತಿಗಳಾದ ಹವಾಮಾನ ವಿಜ್ಞಾನ ಮತ್ತು ಜೇನುಸಾಕಣೆ – ಹೀಗೆ ಮೆಂಡೆಲನ ಬದುಕಿನ ಹಲವು ಸಂಗತಿಗಳ ಬಿಂಬಗಳು ಆ ಕಟ್ಟಡದಲ್ಲಿನ ಕೋಣೆಗಳಲ್ಲಿವೆ. ಮೆಂಡೆಲನ ನಂತರ ತಳಿ ವಿಜ್ಞಾನದಲ್ಲಿ ಜರುಗಿದ ಬೆಳವಣಿಗೆಗಳು, ಡಿಎನ್‌ಎ ಮತ್ತು ಅದರ ವಿನ್ಯಾಸಗಳನ್ನು ವಿವರಿಸುವ ಒಂದು ಘಟಕವೇ ಇದೆ.